**ಚಾಸಾ-4 ಪ್ರಾಸಾ-4**

**3ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ. 5703/2017.**

**ಚಾಸಾ- 4 ಪ್ರಾಸಾ-4**

| | |
|---|---|
| **ಸಾಕ್ಷಿದಾರರ ಹೆಸರು** | ನವೀನ್ ಕುಮಾರ್ ಮಥುರ್ತಿ. |
| **ತಂದೆಯ ಹೆಸರು** | ಶ್ರೀನಿವಾಸ್ ರಾವ್ ಮಥುರ್ತಿ |
| **ವಯಸ್ಸು** | 34 ವರ್ಷ |
| **ಉದ್ಯೋಗ** | ಮ್ಯಾನೇಜರ್, ಇಂಡಿಯನ್ ಬ್ಯಾಂಕ್, ವಿಶಾಖಂ ಪಟ್ಟಣ. |
| **ವಾಸ** | ವಿಶಾಖ ಪಟ್ಟಣ. |
| **ಪ್ರಮಾಣೀಕರಿಸಿದ ದಿನಾಂಕ** | 28 .05.2024. |

**<u>ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :</u>**

ನಾನು ದಿ.24.08.2015 ರಂದು ಪೀಣ್ಯ, ಇಂಡಿಯನ್ ಬ್ಯಾಂಕ್,ಎಸ್.ಎಸ್.ಐ ಬ್ರಾಂಚ್ ನಲ್ಲಿ ತರಬೇತಿಗಾಗಿ ಸಹಾಯಕ ವ್ಯವಸ್ಥಾಪಕ ಅಂತ ಹಾಜರಾಗಿರುತ್ತೇನೆ ಮತ್ತು ಎರಡು ವರ್ಷ ಸಹಾಯಕ ವ್ಯವಸ್ಥಾಪಕ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ. ನಮ್ಮ ಬ್ಯಾಂಕಿನಲ್ಲಿ ಪ್ರಿನ್ಸಿಪಾಲ್ ಪಿಯು ಕಾಲೇಜ್ ಅಂತ ಒಂದು ಖಾತೆ ಮತ್ತು ಉಪ ಪ್ರಾಂಶುಪಾಲರು ಪಿಯು ಕಾಲೇಜ್ ಇವರ ಹೆಸರನಲ್ಲಿ ಒಂದು ಖಾತೆ ಇರುತ್ತದೆ. ಉಪ ಪ್ರಾಂಶುಪಾಲರು ನಮ್ಮ ಖಾತೆಯ ಮೂಲಕ ಚೆಕ್ ಬುಕ್ ಗೆ ಅರ್ಜಿ ಸಲ್ಲಿಸಿದ್ದರು. ಸದರಿ ಚೆಕ್ ಬುಕ್ ಅವರ ವಿಳಾಸಕ್ಕೆ ಹೋಗುತ್ತವೆ. ಎರಡು ಶಾಲೆಗಳು ಅಂದರೆ ಕಾಲೇಜು ಮತ್ತು ಪ್ರೌಢ ಶಾಲೆ ಒಂದೇ ಕಡೆ ಇರುತ್ತವೆ. ಆಯಾಯ ಖಾತೆಗಳಿಗೆ ಸಂಬಂದಪಟ್ಟಂತೆ ಖಾತೆಗಳನ್ನು ನಿರ್ವಹಿಸಲು ಪ್ರಾಂಶುಪಾಲರ ಅಥವಾ ಉಪ ಪ್ರಾಂಶುಪಾಲರ ಮಾದರಿ ಸಹಿಗಳನ್ನು ಪಡೆದಿರುತ್ತೇವೆ. ಅ ವರು ಬದಲಾವಣೆಯಾದಾಗ ಅವರ ಜಾಗದಲ್ಲಿ ಬಂದವರ ಸಹಿಗಳನ್ನು ಹಿಂದೆ ಇದ್ದ ಅಧಿಕಾರಿಗಳು ದೃಡೀಕರಿಸಿ ಕಳುಹಿಸುತ್ತಾರೆ. ಉಪ ಪ್ರಾಂಶುಪಾಲರಿಗೆ ಕಳುಹಿಸಿರುವ ಚೆಕ್ ಪ್ರಾಂಶುಪಾಲರಿಗೆ ಹೋಗಿರುತ್ತದೆ. ಪ್ರಾಂಶುಪಾಲರು ಸದರಿ ಚೆಕ್ ನಲ್ಲಿ ನಾಲ್ಕು ಚೆಕ್ಕುಗಳನ್ನು ಉಪಯೋಗಿಸಿರುತ್ತಾರೆ. ಅವುಗಳಲ್ಲಿ ಒಂದು ಚೆಕ್ ದಿ.27.01.2016 ರೂ.40,000/- ಸ ದರಿ ಚೆಕ್ ನನಗೆ ಬಂದಿತ್ತು. ಬ್ಯಾಲೇನ್ಸ್ ಚೆಕ್ ಮಾಡಿದಾಗ ಬ್ಯಾಲೇನ್ಸ್ ಇತ್ತು. ಸಹಿ ಸಹ

**ಚಾಸಾ-4 ಪ್ರಾಸಾ-4**

ಹೊಂದಾಣಿಕೆಯಾಗಿತ್ತು. ಆದ್ದರಿಂದ ಚೆಕ್ ಪಾಸ್ ಮಾಡಿರುತ್ತೇನೆ. ಪ್ರಾಂಶುಪಾಲರ ಅಸ್ಸಿಸ್ಟೆಂಟ್ ಶ್ರೀನಿವಾಸ್ ರವರು ಹಣ ಪಡೆದಿರುತ್ತಾರೆ. ಫೆಬ್ರವರಿ 1ನೇ ತಾರೀಖಿಗೆ ಈ ಕುರಿತು ತಪ್ಪಾಗಿ ಹಣ ಬಿಡುಗಡೆ ಮಾಡಿಕೊಂಡಿರುತ್ತಾರೆ ಎಂದು ಗೊತ್ತಾಗಿರುತ್ತದೆ. ಟಿ.ಸತೀಶ್ ಚಂದ್ರ , ಆಸ್ಸಿಸ್ಟೆಂಟ್ ಮ್ಯಾನೇಜರ್ ಇವರು ಇಬ್ಬರು ಪ್ರಾಂಶುಪಾಲರು ಮತ್ತು ಉಪ ಪ್ರಾಂಶುಪಾಲರವರ ಜೊತೆ ಮಾತನಾಡಿ ದಿ.01.02.2016 ರಂದು ನಾಲ್ಕು ಚೆಕ್ ನ ಮೊತ್ತವನ್ನು ಒಟ್ಟು ರೂ.1,12,000/- ಚಿಲ್ಲರೆ ಹಣವನ್ನು ಪ್ರಿನ್ಸಿಪಾಲರವರ ಖಾತೆಯಿಂದ ಉಪ ಪ್ರಾಂಶುಪಾಲರ ಖಾತೆಗೆ ಜಮಾ ಮಾಡಿರುತ್ತಾರೆ . ದಿ.17.03.2016 ರಂದು ಪೊಲೀಸರು ಕರೆದಿದ್ದರು ಮತ್ತು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ನಾನು ಪಾಸ್ ಮಾಡಿರುವ ಚೆಕ್ಕನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು : ಶ್ರೀ. ಆರ್.ವಿ ವಕೀಲರು ಎಲ್ ಕೆ ವಕೀಲರ ಪರವಾಗಿ ವಕೀಲರಿಂದ ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು ಸಮಂಜಸ ಕಾರಣಗಳು ಇರದೇ ಇರುವ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಎಮ್.ಎಮ್.ನ್ಯಾ.**
**ಬೆಂಗಳೂರು.**